**GOVERNMENT OF KARNATAKA**
**(DRUGS CONTROL DEPARTMENT)**
**ಪರೀಕ್ಷಾ ಪ್ರಾಧಿಕಾರ ಮಂಡಳಿ (ಡಿ.ಫಾರ್ಮ), ಬೆಂಗಳೂರು**
**BOARD OF EXAMINING AUTHORITY (D.PHARM)**
**C/o Government College of Pharmacy, No. 2, 3rd Floor, P Kalingarao Road, Subbaiah Circle, Bangalore-27**
email: bea.dcd-ka@nic.in, beadpharmacy@yahoo.com Phone : 080- 22483465, 080- 22223466
website: www.beadpharmacy.org

ಸಂಖ್ಯೆ: ಔನಿಇ/ಪಪ್ರಾಮಂ/ಪವಿ/2021-22/678 ದಿನಾಂಕ: 12.08.2021

**ಸುತ್ತೋಲೆ**

ವಿಷಯ:- 2020-21 ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶ ಪಡೆದ ಪ್ರಥಮ ಡಿ.ಫಾರ್ಮ ವಿದ್ಯಾರ್ಥಿಗಳ ಪ್ರವೇಶ ಅನುಮೋದನಾ ಪ್ರಕ್ರಿಯೆ ಬಗ್ಗೆ.

ಉಲ್ಲೇಖ: ಈ ಕಛೇರಿ ಸುತ್ತೋಲೆ ದಿನಾಂಕ 28.01.2021

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಏಪ್ರಿಲ್-2021 ಮಾಹೆಯಲ್ಲಿ ನಡೆಯಬೇಕಿದ್ದ 2020-21ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶ ಪಡೆದ ಪ್ರಥಮ ಡಿ.ಫಾರ್ಮ ವಿದ್ಯಾರ್ಥಿಗಳ ಪ್ರವೇಶ ಅನುಮೋದನಾ ಪ್ರಕ್ರಿಯೆಯು, ಕೋವಿಡ್-2019ರ ಎರಡನೇ ಅಲೆಯಿಂದಾಗಿ ಕರ್ನಾಟಕ ಸರ್ಕಾರವು ಲಾಕ್‌ಡೌನ್ ವಿಧಿಸಿದ ಕಾರಣದಿಂದಾಗಿ ಮುಂದೂಡಲಾಗಿದ್ದ ಸದರಿ ಪ್ರಕ್ರಿಯೆಯನ್ನು ಈ ಕೆಳಕಂಡ ದಿನಾಂಕಗಳಂದು ನಡೆಸಲು ನಿಗದಿಪಡಿಸಿದೆ.

| ಕ್ರಮ ಸಂ. | ಪ್ರವೇಶ ಅನುಮೋದನಾ ಪ್ರಕ್ರಿಯೆಯು ನಡೆಯುವ ದಿನಾಂಕ ಮತ್ತು ಸಮಯ | | ಕಾಲೇಜ್ ಕೋಡ್‌ಗಳು |
|---|---|---|---|
| 1 | 16.08.2021 | ಬೆ. 10.30 ರಿಂದ | 801 ರಿಂದ 845 |
| 2 | 17.08.2021 | ಬೆ. 10.30 ರಿಂದ | 846 ರಿಂದ 890 |
| 3 | 18.08.2021 | ಬೆ. 10.30 ರಿಂದ | 891 ರಿಂದ 910 |
| | | | 701 ರಿಂದ 720 |
| 4 | 19.08.2021 | ಬೆ. 10.30 ರಿಂದ | 721 ರಿಂದ 749 |
| | | | 501 ರಿಂದ 520 |
| 5 | 23.08.2021 | ಬೆ. 10.30 ರಿಂದ | 523 ರಿಂದ 580 |
| 6 | 24.08.2021 | ಬೆ. 10.30 ರಿಂದ | 581 ರಿಂದ 625 |
| 7 | 25.08.2021 | ಬೆ. 10.30 ರಿಂದ | 626 ರಿಂದ 670 |
| 8 | 26.08.2021 | ಬೆ. 10.30 ರಿಂದ | 671 ರಿಂದ 696 |

ಉಲ್ಲೇಖಿತ ಪತ್ರದಲ್ಲಿ ತಾತ್ಕಾಲಿಕ ಪ್ರವೇಶ ಅನುಮೋದನೆಗೆ ಸಲ್ಲಿಸಬೇಕಾದ ಮಾಹಿತಿಗಳ ಬಗ್ಗೆ ವಿವರವಾಗಿ ತಿಳಿಸಲಾಗಿದ್ದು, ಮೇಲೆ ತಿಳಿಸಿದ ದಿನಾಂಕಗಳಂದು ಸಂಬಂಧಿಸಿದ ವಿದ್ಯಾಸಂಸ್ಥೆಯವರು ಮಂಡಳಿಗೆ ಈಗಾಗಲೇ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಿರುವ ದಾಖಲೆಗಳ ಪರಿಶೀಲನೆ ನಡೆಸಲಾಗುವುದು.

----2

12/8/21

ಪ್ರವೇಶ ಅನುಮೋದನಾ ಪ್ರಕ್ರಿಯೆಯನ್ನು ವಿದ್ಯಾಸಂಸ್ಥೆಗಳ ಸಮ್ಮುಖದಲ್ಲಿಯೇ ನಡೆಸಲಿರುವುದರಿಂದ ನಿಗದಿಪಡಿಸಿದ ದಿನಾಂಕದಂದು ಮೇಲೆ ತಿಳಿಸಿರುವ ವಿದ್ಯಾಸಂಸ್ಥೆಯವರು ಪರೀಕ್ಷಾ ಪ್ರಾಧಿಕಾರ ಮಂಡಳಿಯಲ್ಲಿ ತಪ್ಪದೇ ಹಾಜರಿದ್ದು, ಪರಿಶೀಲನಾ ಸಮಿತಿಯ ಮುಂದೆ ಎಲ್ಲಾ ಅಗತ್ಯ ದಾಖಲೆಗಳನ್ನು ಹಾಜರುಪಡಿಸಲು ಈ ಮೂಲಕ ಸೂಚಿಸಲಾಗಿದೆ.

ಅಲ್ಲದೇ, ಸದರಿ ದಿನಗಳಂದು ಈ ಕೆಳಕಂಡ ಅಗತ್ಯ ದಾಖಲೆಗಳನ್ನು ಹಾಜರುಪಡಿಸಲು ಸೂಚಿಸಲಾಗಿದೆ.

1) ಪ್ರವೇಶ ಶುಲ್ಕ ಪಾವತಿಸಿದ ಚಲನ್ನಿನ ಪ್ರತಿಯೊಂದಿಗೆ ಅಫಿಲಿಯೇಷನ್ ಶುಲ್ಕ ಪಾವತಿಯ ಪ್ರತಿಗಳು.
2) 2020-21 ನೇ ಶೈಕ್ಷಣಿಕ ಸಾಲಿಗೆ ಭಾರತೀಯ ಫಾರ್ಮಸಿ ಪರಿಷತ್ತು, ನವದೆಹಲಿ (ಪಿ.ಸಿ.ಐ) ನೀಡಿದ ಅನುಮೋದನಾ ಪತ್ರದ ಪ್ರತಿ.
3) 2020-21ನೇ ಶೈಕ್ಷಣಿಕ ಸಾಲಿನ ಬೋಧಕ ವೃಂದದ (Teaching Staff) ಪಟ್ಟಿಯನ್ನು ಕಡ್ಡಾಯವಾಗಿ ಅವರ ಕೆ.ಎಸ್.ಪಿ.ಸಿ ನೊಂದಣಿ ಸಂಖ್ಯೆಯೊಂದಿಗೆ ಸಲ್ಲಿಸುವುದು.

**ಸೂಚನೆ:**

1. ವಿದ್ಯಾಸಂಸ್ಥೆಯ ಪ್ರಾಂಶುಪಾಲರು ತಮ್ಮ ವಿದ್ಯಾಸಂಸ್ಥೆಯ ಪರವಾಗಿ ಹಾಜರಾಗುವ ಸಿಬ್ಬಂದಿಯನ್ನು Authorization Letter ನೊಂದಿಗೆ ಕಳುಹಿಸುವುದು.
2. ನಿಗದಿ ಪಡಿಸಿದ ದಿನಾಂಕದಂದು ಮಂಡಳಿಗೆ ಹಾಜರಾಗದ ವಿದ್ಯಾಸಂಸ್ಥೆಗಳ ವಿದ್ಯಾರ್ಥಿಗಳ ಪ್ರವೇಶದ ಅನುಮೋದನೆಯನ್ನು ಮಾಡಲು ಅವಕಾಶವಿರುವುದಿಲ್ಲ ಹಾಗೂ ಅಂತಹ ವಿದ್ಯಾರ್ಥಿಗಳು ವಾರ್ಷಿಕ ಪರೀಕ್ಷೆಯನ್ನು ತೆಗೆದುಕೊಳ್ಳಲು ಅರ್ಹರಾಗುವುದಿಲ್ಲ.
3. ಕರ್ನಾಟಕ ಸರ್ಕಾರವು ನಿಗದಿ ಪಡಿಸಿದ ಕೋವಿಡ್-19 ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

(ಉಮೇಶ್.ಎಸ್)
ಸದಸ್ಯ ಕಾರ್ಯದರ್ಶಿಗಳು,
ಪರೀಕ್ಷಾ ಪ್ರಾಧಿಕಾರ ಮಂಡಳಿ,
ಔಷಧ ನಿಯಂತ್ರಣ ಇಲಾಖೆ,
ಬೆಂಗಳೂರು.

ರವರಿಗೆ,
ಸಂಬಂಧಿಸಿದ ಡಿ.ಫಾರ್ಮ ಶಿಕ್ಷಣ ಸಂಸ್ಥೆಗಳಿಗೆ.

ಪ್ರತಿಯನ್ನು:-

1) ಮಾನ್ಯ ಔಷಧ ನಿಯಂತ್ರಕರು, ಕರ್ನಾಟಕ ರಾಜ್ಯ , ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
2) ಅಧ್ಯಕ್ಷರು, ಪರೀಕ್ಷಾ ಪ್ರಾಧಿಕಾರ ಮಂಡಳಿ, ಬೆಂಗಳೂರು ಇವರ ಮಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.